ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY RESEARCH AND REFERENCE BRANCH**

## ಪತ್ರಿಕಾ ತುಣುಕುಗಳು
## PAPER CLIPPINGS

ಶಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ವಾಣಿ    ದಿನಾಂಕ : DATE : 9/2/2020

# ಕೆಲಸದ ವೇಳೆ ಹೊರ ಹೋದರೆ ಗೈರು ಶಿಕ್ಷೆ



**ಬೆಂಗಳೂರು:** ಸಚಿವಾಲಯದ ಅಧಿಕಾರಿ/ನೌಕರರು ಕಚೇರಿ ವೇಳೆ ವೈಯಕ್ತಿಕ ಕೆಲಸ/ಕ್ಯಾಂಟಿನ್ ಇತ್ಯಾದಿ ಕಾರಣಗಳಿಗೆ ಹೊರಹೋಗುವುದನ್ನು ತಪ್ಪಿಸಲು ಚಲನವಲನ ದಾಖಲೆ ನಿರ್ವಹಿಸುವಂತೆ ಕಚೇರಿ ಮುಖ್ಯಸ್ಥರಿಗೆ ಸರ್ಕಾರ ಸೂಚಿಸಿದೆ. ವಿಧಾನಸೌಧ, ವಿಕಾಸಸೌಧ, ಬಹುಮಹಡಿ ಕಟ್ಟಡಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರು ಕಚೇರಿ ಸಮಯದಲ್ಲಿ ಸ್ಥಾನಗಳಲ್ಲಿ ಇರದ ಬಗ್ಗೆ ಸಾರ್ವಜನಿಕರು ಮುಖ್ಯಮಂತ್ರಿ ಮತ್ತು ಮುಖ್ಯಕಾರ್ಯದರ್ಶಿಗಳಿಗೆ ದೂರು ಸಲ್ಲಿಸಿದ್ದರು. ಪ್ರತಿ ಶಾಖೆಯಲ್ಲೂ ಚಲನವಲನ ರಿಜಿಸ್ಟರ್ ತೆರೆಯಬೇಕು. ಕಚೇರಿ ವೇಳೆ ಹೊರಹೋಗುವಾಗ ಮೇಲಧಿಕಾರಿಗಳ ಪೂರ್ವಾನುಮತಿ ಪಡೆಯಬೇಕು. ಹೊರಹೋಗುತ್ತಿರುವ ಉದ್ದೇಶ ಹಾಗೂ ಹಿಂದಿರುಗಿದ ಸಮಯ ನಮೂದಿಸಬೇಕು. ಇಲ್ಲವಾದರೆ ಅನಧಿಕೃತ ಗೈರುಹಾಜರು ಎಂದು ಭಾವಿಸಿ ಕ್ರಮ ಕೈಗೊಳ್ಳುವಂತೆ ಸುತ್ತೋಲೆಯಲ್ಲಿ ನಿರ್ದೇಶಿಸಲಾಗಿದೆ. ಅಲ್ಲದೆ, ಆಗಾಗ್ಗೆ ಕಚೇರಿ ಪರಿವೀಕ್ಷಣೆ ನಡೆಸಿ ಸಿಬ್ಬಂದಿಯ ಅನವಶ್ಯಕ ಓಡಾಟ ತಪ್ಪಿಸಲು ಕ್ರಮ ಕೈಗೊಳ್ಳಬೇಕು ಎಂದು ಆದೇಶಿಸಲಾಗಿದೆ.